Phone No.: 0831-2565203,206,234

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY,

Vidyasangama, National Highway – 04, Belagavi – 591156

E-mail: rcuregistrar@gmail.com **ಕುಲಸಚಿವರ ಕಾರ್ಯಾಲಯ** Website: www.rcub.ac.in

ಕ್ರ.ಸಂ.: ರಾಚವಿ/ಬೆಳಗಾವಿ/ಕುಸಕಾ/2020-21/04 ದಿನಾಂಕ: - 7 APR 2020

## ಸುತ್ತೋಲೆ

ವಿಷಯ: ಸ್ನಾತಕ (UG) ವಿಷಯಗಳ ಪಠ್ಯಕ್ರಮ (Syllabus) ದ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 07-04-2020.

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ, ತಮಗೆ ಈಗಾಗಲೇ ತಿಳಿದಿರುವ ಹಾಗೆ ಕೋವಿಡ್-19 (ಕೊರೊನಾ ವೈರಸ್) ತಡೆಗಟ್ಟುವಿಕೆ ಸಂಬಂಧ ಮುಂಜಾಗ್ರತಾ ಕ್ರಮವಾಗಿ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯಗಳಿಗೆ ರಜೆಯನ್ನು ಘೋಷಿಸಲಾಗಿರುತ್ತದೆ.

ಮುಂದುವರೆದು, ದಿನಾಂಕ: 07-04-2020 ರಂದು ಮಾನ್ಯ ಉಪ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾದ ಶ್ರೀ. ಪ್ರದೀಪ, ಇವರು ZOOM ವೀಡಿಯೊ ಕಾನ್ಫರೆನ್ಸ್‌ನಲ್ಲಿ ಕೆಲವು ಕ್ರಮಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

ಸದರಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯದ ಸ್ನಾತಕ (UG) ವಿಷಯಗಳ 75% ರಿಂದ 80% ರಷ್ಟು ಪಠ್ಯಕ್ರಮವು ಪೂರ್ಣಗೊಂಡಿರುತ್ತದೆ ಎಂದು ಹಲವಾರು ಪ್ರಾಂಶುಪಾಲರು ತಿಳಿಸಿರುತ್ತಾರೆ. ಇನ್ನುಳಿದ ಬಾಕಿ 20% ರಿಂದ 25% ರಷ್ಟು ಪಠ್ಯಕ್ರಮವನ್ನು ಹದಿನೈದು ದಿನಗಳ ಒಳಗಾಗಿ ತಮ್ಮ ಮಹಾವಿದ್ಯಾಲಯದಲ್ಲಿರುವ ಎಲ್ಲ ವಿಷಯಗಳ ಪ್ರಾಧ್ಯಾಪಕರುಗಳಿಗೆ ಬಾಕಿ 20% ರಿಂದ 25% ರಷ್ಟು ಪಠ್ಯಕ್ರಮದ ನೋಟ್ಸ್ ಅಥವಾ e-content or video format ನಲ್ಲಿ ತಯಾರಿಸಿ ತಮ್ಮ ಮಹಾವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳಿಗೆ WhatsApp, YouTube ಇನ್ನಿತರ ICT technology ಸಾಧನಗಳ ಮೂಲಕ ವಿದ್ಯಾರ್ಥಿಗಳಿಗೆ ತಲುಪಿಸಲು ಸೂಚನೆ ನೀಡಬೇಕಾಗಿ ತಿಳಿಸಲಾಗಿದೆ.

Internal Assessment ಕುರಿತಂತೆ, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ವಿಷಯಗಳ ಪ್ರಶ್ನೆಗಳನ್ನು Assignment ರೂಪದಲ್ಲಿ ಕೊಟ್ಟು ಅದನ್ನೇ ಎರಡನೇ Internal Assessment ಅಂಕಗಳಗಾಗಿ ಪರಿಗಣಿಸಲು ಸೂಚಿಸಿದೆ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ಮಹಾವಿದ್ಯಾಲಯದ ಆಂತರಿಕ ಪರೀಕ್ಷಕರಿಂದ ನಡೆಸಿ ಅಂಕಗಳನ್ನು ಸಿದ್ಧಪಡಿಸಿ ತಯಾರಿಸಿ ಇಡಲು ಈ ಮೂಲಕ ಸೂಚಿಸಲಾಗಿದೆ.

ಸೂಚನೆ:

- ಪ್ರಾಧ್ಯಾಪಕರುಗಳು ಯಾವುದೇ ನೋಟ್ಸ್‌ನ್ನು ಕಳಿಸಿದಾಗ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತಲುಪಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕು.
- ಸ್ನಾತಕ ವಿದ್ಯಾರ್ಥಿಗಳು ಈ ಮೇಲ್ಕಾಣಿಸಿದ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿದಾಗ ವಿಶ್ವವಿದ್ಯಾಲಯಕ್ಕೆ ದೂರುಗಳು ಬರದಂತೆ ನೋಡಿಕೊಳ್ಳುವುದು.

ಕುಲಸಚಿವರು

ಕುಲಸಚಿವರು
ರಾಣಿ ಚನ್ನಮ್ಮಾ ವಿಶ್ವವಿದ್ಯಾಲಯ
ಬೆಳಗಾವಿ

ಇವರಿಗೆ,

1. ಪ್ರಾಂಶುಪಾಲರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಸ್ನಾತಕ ಸಂಯೋಜಿತ ಮಹಾವಿದ್ಯಾಲಯಗಳು.
2. ರಕ್ಷಾಪ್ರತಿ

RANI CHANNAMMA UNIVERSITY BELAGAVI